ಆ) ಆರ್.ಐ.ಡಿ.ಎಫ್. - 4 ರಡಿ ಕಾಮಗಾರಿಗಳನ್ನು ಗುರುತಿಸಿದ್ದು ಆ ಪ್ರಸ್ತಾವನೆಗೆ ನಬಾರ್ಡ್ ವತಿಯಿಂದ ಅನುದಾನ ದೊರೆತ ನಂತರದ ಸಮಯದಿಂದ 18 ತಿಂಗಳೊಳಗಾಗಿ ಮುಗಿಸ ಬಹುದಾಗಿರುತ್ತದೆ.

ಇ) ಗ್ರಾಮೀಣ ಸಂಪರ್ಕ ಹೊಂದಿರುವಂತಹ, 5 ಕಿ.ಮೀ. ಗಿಂತ ಕಡಿಮೆ ಉದ್ದದ 15 ಲಕ್ಷ ರೂ. ಗಳಿಗೂ ಕಡಿಮೆ ಮೊತ್ತದ ಮತ್ತು ಮರು ಡಾಂಬರೀಕರಣ ಹೊರತುಪಡಿಸಿದ ಮತ್ತು ಕೃಷಿ ಅಭಿವೃದ್ಧಿಗೆ ಸಹಾಯವಾಗುವಂತಹ ಕಾಮಗಾರಿಗಳನ್ನು ಆಯ್ಕೆ ಮಾಡಲಾಗಿದೆ.

ರಾಜ್ಯದಲ್ಲಿ ಒಟ್ಟು ಅತಿಕ್ರಮಣ ಮಾಡಿರುವ ಅರಣ್ಯ ಭೂಮಿ

2333 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಒಟ್ಟು ಅತಿಕ್ರಮಣ ಮಾಡಿರುವ ಅರಣ್ಯ ಭೂಮಿ ವಿಸ್ತೀರ್ಣ ಎಷ್ಟು? ಎಷ್ಟು ಕುಟುಂಬಗಳಿಗೆ ಇದು ಅನ್ವಯವಾಗುತ್ತದೆ?*

ಆ) *ಈ ಭೂಮಿಗಳನ್ನು ಸಕ್ರಮ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?*

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) ರಾಜ್ಯದಲ್ಲಿ ಅತಿಕ್ರಮಣ ಮಾಡಿರುವ ಅರಣ್ಯ ಭೂಮಿಯ ವಿವರ ಈ ಕೆಳಗಿನಂತಿದೆ :

ಕುಟುಂಬ	*ಒಟ್ಟು ವಿಸ್ತೀರ್ಣ*
1,22,591	1,07,065.100 ಹೆಕ್ಟೇರ್

ಆ) ಕೇಂದ್ರ ಸರ್ಕಾರವು ದಿನಾಂಕ 27.4.78ರ ಪೂರ್ವದ ಅತಿಕ್ರಮಣಗಳ ಪೈಕಿ 19,348 ಪ್ರಕರಣಕ್ಕೆ ಸಂಬಂಧಿಸಿದ 14,848.826 ಹೆಕ್ಟೇರ್ ಅರಣ್ಯ ಭೂಮಿ ಸಕ್ರಮಗೊಳಿಸಲು ಅನುಮೋದನೆ ನೀಡಿದ್ದು, ರಾಜ್ಯ ಸರ್ಕಾರವು ತನ್ನ ಆದೇಶ ಸಂಖ್ಯೆ ಅಪಜೀ 5 ಎಫ್ ಜಿಎಲ್ 90, ದಿನಾಂಕ 5.5.97ರಲ್ಲಿ ಹಲವು ನಿಬಂಧನೆಗಳನ್ನು ವಿಧಿಸಿ ಸಕ್ರಮಗೊಳಿಸಲು ಆದೇಶ ನೀಡಿ ಪಟ್ಟ ನೀಡಿರುವ ಅಧಿಕಾರವನ್ನು ಆಯಾ ಜಿಲ್ಲಾಧಿಕಾರಿಗಳಿಗೆ ನೀಡಿರುತ್ತಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಹಲವು ಬಂದರುಗಳನ್ನು ಅಭಿವೃದ್ಧಿ ಪಡಿಸುವುದು.

2334 - ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) : ಮಾನ್ಯ ಬಂದರು ಮತ್ತು ಮೀನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರ ಕನ್ನಡ ಜಿಲ್ಲೆಯಲ್ಲಿ ಹಲವು ಬಂದರುಗಳನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವ ಯೋಜನೆಗಳಾವುವು (ವಿವರ ನೀಡುವುದು)?*